**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಂತಾಮಣಿ**

**ಸಿಸಿ ಸಂಖ್ಯೆ :16/2019**

ಚಾಸಾ: 8

ಪ್ರಾಸಾ: 3

ದಿನಾಂಕ 21.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀರಾಮಪ್ಪ |
| ತಂದೆಯ ಹೆಸರು | : | ವೆಂಕಟಸ್ವಾಮಿ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕೊಡಿಗೇನಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಕಳೆದ 5 ರಿಂದ 6 ವರ್ಷಗಳ ಹಿಂದೆ ನನಗೆ ಸೇರಿದ ದ್ವಿಚಕ್ರ ವಾಹನ ಸಂಖ್ಯೆ ಕೆಎ 63 ಇ 7892 ವಾಹನ ಕಳವು ಆಗಿತ್ತು. ಆ ಬಗ್ಗೆ ಬೆಂಗಳೂರಿನ ಕೆಆರ್ ಪುರಂ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೆ. ಸದರಿ ವಾಹನ ಕೆಂಚಾರ್ಲಹಳ್ಳಿ ಪೋಲೀಸ್ ಠಾಣೆಯಲ್ಲಿ ಇದೆ ಎಂದು ಪೋಲೀಸರು ತಿಳಿಸಿದ್ದರು. ಅದರಂತೆ ಸದರಿ ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ವಶಕ್ಕೆ ಪಡೆದಿರುತ್ತೇನೆ. ಸದರಿ ವಾಹನವನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯೇ ನನ್ನ ಬಾಬ್ತು ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿದ್ದರು ಎಂದು ಪೋಲೀಸರಿಂದ ನನಗೆ ತಿಳಿಯಿತು. ಪೋಲೀಸರು ನನಗೆ ಆರೋಪಿಯನ್ನು ತೋರಿಸಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಬಿ ಆರ್ ವಕೀಲರಿಂದಃ**

ಹಿರೋ ಫ್ಯಾಷನ್ ವಾಹನ ಕಳ್ಳತನವಾಗಿತ್ತು. ಯಾವ ಮಾಡೆಲ್ ಎಂದು ನನಗೆ ಗೊತ್ತಿಲ್ಲ. ನಾನು ಆ ವಾಹನದ ಮೊದಲ ಮಾಲಿಕ. ಆ ವಾಹನದ ಸಂಖ್ಯೆ ಕೆಎ 53 ಇ 8792 ಆಗಿತ್ತು. ಆ ವಾಹನ ನಮ್ಮ ಮನೆಯ ಬಳಿ 5 ರಿಂದ 6 ವರ್ಷಗಳ ಹಿಂದೆ ಕಳ್ಳತನವಾಗಿತ್ತು, ದಿನಾಂಕ ಹೇಳಲು ಮರೆತು ಹೋಗಿದೆ. ದೂರನ್ನು ನೀಡಿದಾಗಲೂ ಆ ವಾಹನವನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ತಿಳಿದಿರಲಿಲ್ಲ. ಪೋಲೀಸರು ನನಗೆ ಆರೋಪಿ ಈತನೇ ಕಳ್ಳತನ ಮಾಡಿದ್ದ ಎಂದು ತೋರಿಸಿದ್ದರಿಂದಲೇ ನನಗೆ ತಿಳಿದು ಬಂತು ಎಂದರೆ ಸರಿ. ನಾನು ಆರೋಪಿ ಕಳ್ಳತನ ಮಾಡುವುದನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ.

2. ಪೋಲೀಸರು ಆ ವಾಹನವನ್ನು ಎಲ್ಲಿ ವಶಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಆ ವಾಹನವನ್ನು ನ್ಯಾಯಾಲಯದಿಂದ ಯಾವ ದಿನಾಂಕದಂದು ನನ್ನ ವಶಕ್ಕೆ ಪಡೆದಿದ್ದೆ ಎಂದು ನೆನಪಿಲ್ಲ. ಆ ವಾಹನಕ್ಕೂ ನನಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ, ಆರೋಪಿಯನ್ನು ಈ ಕೇಸಿನಲ್ಲಿ ಸುಮ್ಮನೆ ಸೇರಿದ್ದಾರೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತನ್ನು ಕೇಳಿ ನ್ಯಾಯಾಲಯದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**